ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7225/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 07/04/2017

# ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಮಂಜುನಾಥ ಆಚಾರಿ, ಗುಜ್ಜಾಡಿ ಗ್ರಾಮ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಮಂಜುನಾಥ ಆಚಾರಿ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಕುಂದಾಪುರ ತಾಲ್ಲೂಕಿನ ಗುಜ್ಜಾಡಿ ಗ್ರಾಮದ ಸರ್ವೇ ನಂ.55/2 ರ ಜಮೀನು ಮೂಲತಹ: ದೂರುದಾರರ ಪಿತ್ರಾರ್ಜಿತ ಆಸ್ತಿಯಾಗಿದ್ದು, ವಾರಸನಾಥೆಯ ಮೇರೆಗೆ ದೂರುದಾರರು ಮತ್ತು ಅವರ ಸಹೋದರಿಯರು ಮತ್ತು ದಾಯಾದಿಗಳು ಹಕ್ಕುದಾರರಾಗಿರುತ್ತಾರೆ. ಆದರೆ, ಈ ಬಗ್ಗೆ ವಿಭಾಗ ಪತ್ರವಾಗಿರುವುದಿಲ್ಲ. ದೂರುದಾರರ ದಾಯಾದಿಗಳು ಸದರಿ ಆಸ್ತಿಯಲ್ಲಿ ದೂರುದಾರರಿಗೆ ಮೇಲೆ ಹೇಳಿದ ಆಸ್ತಿಯಲ್ಲಿ ಹಕ್ಕಿಲ್ಲವೆಂದು ಹೆದರಿಸುತ್ತಿರುತ್ತಾರೆ. ದಾಯಾದಿಯಾದ ಶ್ರೀ ನಾರಾಯಣ ಆಚಾರಿ ಇವರು ಇತರೆ ವಾರಸುದಾರರ ಕುಮ್ಮಕಿನಿಂದ ಸರ್ವೇ ನಂ.55/2ರ ಜಮೀನಿನಲ್ಲಿ ಪ್ಲೈನಿಂಗ್ ಮಷಿನ್ ಅನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ. ಇದಲ್ಲದೇ ಇನ್ನೊಂದು ಸ್ಥಳದಲ್ಲಿ ಅಕ್ರಮವಾಗಿ ಸ್ಥಳವನ್ನು ಪರಿವರ್ತಿಸಿ ಮನೆ ಕಟ್ಟಲು ಪರವಾನಗೆಯನ್ನು ಗ್ರಾಮ ಪಂಚಾಯತಿ ವತಿಯಿಂದ ಪಡೆದಿರುತ್ತಾರೆ. ಪಡೆದಿರುವ ವಿದ್ಯುತ್ ಸಂಪರ್ಕವು ಸಹ ಅನಧೀಕೃತವಾಗಿರುತ್ತದೆ. ದಾಯಾದಿ ಶ್ರೀ ಮಹಾಬಲ ಆಚಾರಿಯವರ ಪತ್ನಿ ಶ್ರೀಮತಿ ಸುಬ್ಬಮ್ಮ ಆಚಾರ್ತಿ ಇವರು ಗುಜ್ಜಾಡಿ ಗ್ರಾಮದ ಸರ್ವೇ ನಂ.41/5 ರಲ್ಲಿ ಪಂಚಾಯತಿ ವತಿಯಿಂದ ಅನುಮತಿ ಪಡೆದು ಮನೆ ಕಟ್ಟಿರುತ್ತಾರೆ ಹಾಗೂ ಅದೇ ಗ್ರಾಮದ ಸರ್ವೇ ನಂಬರ್ 55/1 ರಲ್ಲಿ ತನ್ನ ಮಗನಾದ ನಾರಾಯಣಚಾರಿಗೆ ಮನೆ ಕಟ್ಟಲು ಪಂಚಾಯತಿಗೆ ಅರ್ಜಿ ಸಲ್ಲಿಸಿ ಪರವಾನಗೆ ಪಡೆದಿರುತ್ತಾರೆ. ಆದರೆ ಪರವಾನಗೆ ಪಡೆಯಲು ಸಲ್ಲಿಸಿದ ಅರ್ಜಿಯಲ್ಲಿ ನೀಡಿದ್ದ

ಮಾಹಿತಿಗಳು ತಪ್ಪಿನಿಂದ ಕೂಡಿದ್ದರು ಪಂಚಾಯತಿಯವರು ಅದನ್ನು ಪರಿಶೀಲಿಸದೇ ಪರವಾನಗೆಯನ್ನು ನೀಡಿರುತ್ತಾರೆ. ಇದಲ್ಲದೇ, ಸರ್ವೇ ನಂಬರ್ 41/5 ಹಾಗೂ 55/1ರ ಜಾಗಕ್ಕೆ ಯಾವುದೇ ರೀತಿ ಸಂಬಂಧಿಸದ ಹಾಗೂ ದೂರುದಾರರಿಗಾಗಲೀ ಅಥವಾ ಅವರ ದಾಯಾದಿಗಳಿಗಾಗಲೀ ಸಂಬಂಧಿಯಲ್ಲದ ಶ್ರೀ ದಿನೇಶ್ ಆಚಾರಿ ಸರ್ವೆ ನಂ.41/5 ಹಾಗೂ 55/1ರ ಜಾಗದಲ್ಲಿ ಸುಮಾರು 8 ರಿಂದ 9 ವರ್ಷಗಳ ಹಿಂದೆಯೇ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಹಾಗೂ ಗಿಡಮರಗಳನ್ನು ಸಹ ಬೆಳೆಸಿರುತ್ತಾರೆ. ಆದರೆ, ಅವರ ಹೆಸರಿನಲ್ಲಿ ಯಾವುದೇ ದಾಖಲೆಗಳು ಇಲ್ಲದಿದ್ದರೂ 3ನೇ ಎದುರುದಾರರು ವಿದ್ಯುತ್ ಸಂಪರ್ಕ ಕಲ್ಪಿಸಿಕೊಟ್ಟಿರುತ್ತಾರೆ. ಇದಲ್ಲದೇ, ಗುಜ್ಜಾಡಿ ಗ್ರಾಮದ ಸರ್ವೇ ನಂ.41/5ರ ಜಾಗದಲ್ಲಿ ಇರುವ ಮನೆಗೆ ಸಂಬಂಧಿಸಿದ ಪಡಿತರ ಚೀಟಿಯನ್ನು ಬಳಸಿಕೊಂಡು ಸರ್ವೇ ನಂ.55/2ರ ಜಾಗದಲ್ಲಿ ಹೊಸದಾಗಿ ನಿರ್ಮಿಸಿರುವ ತಾರಸಿ ಮನೆಗೆ ರಾಜೀವ್ ಗಾಂಧಿ ವಿದ್ಯುತ್ ಯೋಜನೆಯಡಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಲಾಗಿದೆ. ಇದರಿಂದ, ರೂ.30.00 ಲಕ್ಷೂ ಹೆಚ್ಚಿನ ಮೌಲ್ಯದ ವಿದ್ಯುತ್ ಅನ್ನು ಅನರ್ಹ ಫಲಾನುಭವಿಯಿಂದ ದುರ್ಬಳಕೆಯಾಗಿದೆ, ಇದಕ್ಕೆ 2ನೇ ಎದುರುದಾರರಾದ ಶ್ರೀ ಶೇಖರ್ ದೇವಡಿಗ ರವರು ಕಾರಣೀಕರ್ತರಾಗಿರುತ್ತಾರೆ. ಅದೇ ರೀತಿ ಶ್ರೀ ಸದಾಶಿವ ಆಚಾರಿ ಇವರ ಪತ್ನಿ ಶ್ರೀಮತಿ ಸುಮನಾರವರು ಹಿಂದೆ ಪಂಚಾಯತಿ ಸದಸ್ಯರಾಗಿದ್ದು, ಸರ್ಕಾರಿ ಸವಲತ್ತುಗಳನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ. ಇದಲ್ಲದೇ, 1 ಮತ್ತು 2ನೇ ಎದುರುದಾರರು ಗ್ರಾಮ ಪಂಚಾಯತಿ ವತಿಯಿಂದ ಕರವಸೂಲಾತಿಯ ರಿಜಿಸ್ಟರ್ ಅನ್ನು ಸಹ ಸರಿಯಗಿ ನಿರ್ವಹಿಸಿರುವುದಿಲ್ಲ. ಆದ್ದರಿಂದ, ಎದುರುದಾರರಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. 1 ಮತ್ತು 2ನೇ ಎದುರುದಾರರುಗಳಿಗೆ ರವಾನಿಸಲಾಗಿದ್ದ ನೋಟೀಸ್‌ಗಳು ಅವರಿಗೆ ತಲುಪಿರುವ ಬಗ್ಗೆ ಸ್ವೀಕೃತಿಯು ಬಂದಿರುತ್ತದೆ. (ಸದರಿ ಸ್ವೀಕೃತಿಯನ್ನು ಹಾಜರುಪಡಿಸಲಾಗಿದೆ). ಆದ್ದರಿಂದ, 1 ಮತ್ತು 2ನೇ ಎದುರುದಾರರುಗಳ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಲಾಗಿದೆ.

12(1)

3. 1ನೇ ಎದುರುದಾರರಾದ ಶ್ರೀ ರಂಗನಾಥ್ ಇವರಿಗೆ ಉಡುಪಿಯ ಈ ಸಂಸ್ಥೆಯ ಪೋಲೀಸ್ ನಿರೀಕ್ಷಕರು ನೋಟೀಸನ್ನು ಜಾರಿ ಮಾಡಿರುವ ಬಗ್ಗೆ ಸ್ವೀಕೃತಿಯನ್ನು ಕಳುಹಿಸಿರುತ್ತಾರೆ. ಸದರಿ ಸ್ವೀಕೃತಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ.

4. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹಿಂದಿನ ಶಾಖಾಧಿಕಾರಿಯವರು ಶ್ರೀ ಸದಾಶಿವ ಆಚಾರಿ ಇವರಿಗೆ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಯಡಿಯಲ್ಲಿ ಆರ್‌ಆರ್ ನಂಬರ್ RGBY46900 ದಿನಾಂಕ: 15/05/2014 ರಂದು ವಿದ್ಯುತ್ ಸಂಪರ್ಕ ನೀಡಿರುತ್ತಾರೆ. ರಾಜೀವ್ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಯಡಿಯಲ್ಲಿ ವಿದ್ಯುತ್ ನೀಡಲು ಗ್ರಾಮ ಪಂಚಾಯತಿಯ ಶಿಫಾರಸ್ಸು ಮಾತ್ರ ಬೇಕಾಗಿರುವುದರಿಂದ, ಅದನ್ನು ಪರಿಗಣಿಸಿ ವಿದ್ಯುತ್ ಸಂಪರ್ಕ ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ.

5. ಸದರಿ 3ನೇ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಅದರಲ್ಲಿ 3ನೇ ಎದುರುದಾರರು ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಗ್ರಾಮ ಪಂಚಾಯತಿ ವತಿಯಿಂದ ಶಿಫಾರಸ್ಸು ಪತ್ರ ನೀಡಿದ್ದರೆ ಮಾತ್ರ ಸಾಕೆಂದು ತಿಳಿಸಿರುತ್ತಾರೆ. ಆದರೆ, ಶಿಫಾರಸ್ಸು ಪತ್ರವನ್ನು ವಸ್ತುಸ್ಥಿತಿಗಳನ್ನು ಸರಿಯಾಗಿ ಪರಿಶೀಲಿಸಿ ನೀಡಿರುತ್ತಾರೋ ಇಲ್ಲವೋ ಎಂಬುದನ್ನು ಪರಿಶೀಲಿಸದೇ 3ನೇ ಎದುರುದಾರರು ನಿರ್ಲಕ್ಷತನ ತೋರಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

6. ದೂರಿನಂಶಗಳನ್ನು, 3ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಗುಜ್ಜಾಡಿ ಗ್ರಾಮದ ಸರ್ವೇ ನಂಬರ್ 55/2 ರ ಜಮೀನಿಗೆ ಶ್ರೀಮತಿ ಸುಬ್ಬಮ್ಮ, ಶ್ರೀ ನಾರಾಯಣ ಆಚಾರ್ಯ, ಶ್ರೀ ಗೋಪಾಲ ಆಚಾರ್ಯ, ಶ್ರೀ ಲಕ್ಷ್ಮಣ ಅಕ್ಕಸಾಲಿ, ಶ್ರೀಮತಿ ಪಣಿಯಮ್ಮ ಆಚಾರ್ತಿ, ಶ್ರೀಮತಿ ಪದ್ಮಾವತಿ, ಶ್ರೀಮತಿ ವಾರಿಜಾ, ಶ್ರೀಮತಿ ಶೈಲ, ಶ್ರೀಮತಿ ಇಂದಿರಾ, ಶ್ರೀ ಮಂಜುನಾಥ್, ಶ್ರೀಮತಿ ಜ್ಯೋತಿ ಹಾಗೂ ಶ್ರೀಮತಿ ಶಾಲಿನಿ ಹಾಗೂ ಅವರ ಮಕ್ಕಳು ಇವರುಗಳು ಜಂಟಿ ಖಾತೆದಾರರೆಂದು ಕಂಡುಬರುತ್ತದೆ (ಸದರಿ ಆರ್‌ಟಿಸಿಯನ್ನು ಹಾಜರುಪಡಿಸಲಾಗಿದೆ). ಗುಜ್ಜಾಡಿ ಗ್ರಾಮದ ಸರ್ವೇನಂಬರ್ 55/1ರ ಜಮೀನಿಗೆ ಶ್ರೀ ನರಸಿಂಹ ನಾಯ್ಕ ಇವರು ಖಾತೆದಾರರಾಗಿ ಇರುವುದು ಆರ್‌ಟಿಸಿ ಪ್ರತಿಯಿಂದ ಕಂಡು ಬರುತ್ತದೆ (ಸದರಿ ಆರ್‌ಟಿಸಿ ಪ್ರತಿಯನ್ನು ಹಾಜರುಪಡಿಸಲಾಗಿದೆ). ಗುಜ್ಜಾಡಿ ಗ್ರಾಮದ ಸರ್ವೇ ನಂ.41/6ರ ಜಮೀನಿಗೆ ಶ್ರೀಮತಿ ಸುಬ್ಬಮ್ಮ, ಶ್ರೀ ನಾರಾಯಣ ಆಚಾರ್ಯ, ಶ್ರೀ ಗೋಪಾಲ ಆಚಾರ್ಯ ಹಾಗೂ ಅವರ ಮಕ್ಕಳುಗಳು ಜಂಟಿ ಖಾತೆದಾರರೆಂದು ಆರ್‌ಟಿಸಿ ಪ್ರತಿಯಿಂದ ಕಂಡು ಬರುತ್ತದೆ. (ಸದರಿ ಆರ್‌ಟಿಸಿ

ಪ್ರತಿಯನ್ನು ಹಾಜರುಪಡಿಸಲಾಗಿದೆ). ಗುಜ್ಜಾಡಿ ಗ್ರಾಮದ ಸರ್ವೇ ನಂ.41/5ರ ಜಮೀನಿಗೆ ಶ್ರೀ ಮಹಾಬಲ ಆಚಾರಿ ಇವರು ಖಾತೆದಾರರೆಂಬುದಾಗಿ ಆರ್‌ಟಿಸಿ ಪ್ರತಿಯಿಂದ ಕಂಡು ಬರುತ್ತದೆ (ಸದರಿ ಆರ್‌ಟಿಸಿ ಪ್ರತಿಯನ್ನು ಹಾಜರುಪಡಿಸಲಾಗಿದೆ). ಒಪ್ಪಿಗೆ ಪ್ರಮಾಣ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ಗುಜ್ಜಾಡಿ ಗ್ರಾಮದ ಮಹಾಬಲ ಆಚಾರಿಯವರ ಪತ್ನಿ ಶ್ರೀಮತಿ ಸುಬ್ಬಮ್ಮ ಆಚಾರ್ತಿಗೆ ಅವರ ಮಕ್ಕಳಾದ ಶ್ರೀ ನಾರಾಯಣ ಆಚಾರಿ, ಶ್ರೀ ಗೋಪಾಲ ಆಚಾರಿ ಇವರುಗಳು ಸರ್ವೇ ನಂಬರ್ 41/5ರ ಜಮೀನಿನ 60 ಸೆಂಟ್ಸ್ ಜಾಗದಲ್ಲಿ ಮನೆ ಕಟ್ಟಲು ಪಡಿತರ ಚೀಟಿ ಪಡೆಯಲು, ವಿದ್ಯುತ್ ಸಂಪರ್ಕ ಪಡೆಯಲು ತಮ್ಮ ತಕರಾರು ಯಾವುದು ಇಲ್ಲವೆಂದು ಹೇಳಿ ಒಪ್ಪಿಗೆ ಪತ್ರ ನೀಡಿರುವುದು ಕಂಡು ಬರುತ್ತದೆ.

7. ಶ್ರೀ ಮಂಜುನಾಥ ಆಚಾರಿ ಅಂದರೆ ದೂರುದಾರರು ದಿ:26/11/2013 ರಂದು ಸರ್ವೇ ನಂಬರ್ 55/2 ರಲ್ಲಿ ಮನೆ ಕಟ್ಟುವ ಬಗ್ಗೆ ಗ್ರಾಮ ಪಂಚಾಯತಿ ಕಾರ್ಯಾಲಯ, ಗುಜ್ಜಾಡಿ ಇಲ್ಲಿ ಆಕ್ಷೇಪಣೆ ಸಲ್ಲಿಸಿದ್ದು, ಸದರಿ ಆಕ್ಷೇಪಣೆ ಪ್ರತಿಯನ್ನು ಹಾಜರುಪಡಿಸಲಾಗಿದೆ. ದೂರುದಾರರು ಶ್ರೀಮತಿ ಸುಬ್ಬಮ್ಮ ಇವರು ಗುಜ್ಜಾಡಿ ಗ್ರಾಮದ ಸರ್ವೇ ನಂ.55/2ರ 76 ಸೆಂಟ್ಸ್ ಜಾಗದಲ್ಲಿ ಶ್ರೀಮತಿ ಸುಬ್ಬಮ್ಮರವರು ಮನೆಕಟ್ಟುತ್ತಿರುವ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಸರ್ವೇ ನಂಬರ್ 55/2 ಮೇಲೇ ಹೇಳಿದಂತೆ ಶ್ರೀಮತಿ ಸುಬ್ಬಮ್ಮ ರವರಲ್ಲದೇ ಇತರೆ ವಾರಸುದಾರರು ಸಹ ಇರುವುದು ಆರ್‌ಟಿಸಿ ಪ್ರತಿಯಿಂದ ಕಂಡು ಬರುತ್ತದೆ. ಅದರಲ್ಲಿ ಶ್ರೀ ಮಂಜುನಾಥ್ ಇವರು ಸಹ ಜಂಟಿ ಖಾತೆದಾರರೆಂಬುದಾಗಿ ತೋರಿಸಲಾಗಿದೆ. ಆದರೆ, ಶ್ರೀಮತಿ ಸುಬ್ಬಮ್ಮ ರವರು ತಮ್ಮ ಮಕ್ಕಳ ವತಿಯಿಂದ ಮಾತ್ರ ಒಪ್ಪಿಗೆ ಪತ್ರವನ್ನು ಪಡೆದಿರುವುದು ಕಂಡು ಬರುತ್ತದೆ.

8. ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯ ನಿರ್ಣಯದಂತೆ ಶ್ರೀ ಮಂಜುನಾಥ್ ಆಚಾರಿ ಇವರು ಜಂಟಿ ಖಾತೆಯಲ್ಲಿರುವ ಸ್ಥಿರಾಸ್ತಿಯಲ್ಲಿ ವಿಭಾಗ ಪತ್ರವಾಗದೇ ಬಾಕಿ ಇರುವಾಗ ಏನೊಂದು ಹಕ್ಕಿಲ್ಲದವರಿಗೆ ಮನೆ ಕಟ್ಟಡ ಕಟ್ಟಲು ಆಕ್ಷೇಪಣೆ ವ್ಯಕ್ತ ಪಡಿಸಿರುವ ಹಿನ್ನೆಲೆಯಲ್ಲಿ ಅರ್ಜಿದಾರರಾದ ಶ್ರೀ ಸದಾಶಿವ ಆಚಾರಿ ಹಾಗೂ ಅವರ ಪತ್ನಿ ಶ್ರೀಮತಿ ಸುಮನಾ ಇವರುಗಳು ಸ್ಥಳದ ಹಕ್ಕುದಾರರಿಂದ ಒಪ್ಪಿಗೆಯನ್ನು ಪಡೆಯದೇ ಬಲಾತ್ಕಾರವಾಗಿ ಮನೆ ಕಟ್ಟಡ ಕಟ್ಟುತ್ತಿರುತ್ತಾರೆಂದು ತಿಳಿಸಿರುವುದರಿಂದ, ಶ್ರೀ ಸದಾಶಿವ ಆಚಾರಿ ಮತ್ತು ಶ್ರೀಮತಿ ಸುಮನಾ ಇವರಿಗೆ ಕಟ್ಟಡ ನಿರ್ಮಿಸಲು ಇದ್ದ ಸೂಕ್ತ ದಾಖಲೆಗಳನ್ನು ಪಂಚಾಯತಿಗೆ ಸಲ್ಲಿಸತಕ್ಕದ್ದು ಮತ್ತು ಪಂಚಾಯತಿ ಪರವಾನಗೆ ಇಲ್ಲದೇ ಕಟ್ಟಡ ಕಟ್ಟುವುದನ್ನು ತಕ್ಷಣ ನಿಲ್ಲಿಸಬೇಕೆಂದು ಸದರಿಯವರಿಗೆ ನೋಟೀಸ್ ನೀಡುವಂತೆ ತೀರ್ಮಾನಿಸಿರುವುದು ಕಂಡು ಬರುತ್ತದೆ. ಸದರಿ ದಿ:31/12/2013ರ ಪಂಚಾಯತಿ ನಿರ್ಣಯವನ್ನು ಹಾಜರುಪಡಿಸಲಾಗಿದೆ.

Sd/-

12(1)

9. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಪಂಚಾಯತಿ ವತಿಯಿಂದ ಅನಧೀಕೃತ ಕಟ್ಟಡ ಕಟ್ಟುವ ಬಗ್ಗೆ ನೋಟೀಸ್ ನೀಡುವಂತೆ ತೀರ್ಮಾನ ಕೈಗೊಂಡಿದ್ದರೂ, ಸದರಿ ಕಟ್ಟಡವನ್ನು ಕಟ್ಟುತ್ತಿದ್ದ ಶ್ರೀ ಸಾದಾಶಿವ ಆಚಾರಿ ಮತ್ತು ಶ್ರೀಮತಿ ಸುಮನಾ ಇವರಿಗೆ ನೋಟೀಸ್ ನೀಡಿರುವುದು ಕಂಡು ಬರುವುದಿಲ್ಲ. ಈ ಬಗ್ಗೆ 1 ಮತ್ತು 2ನೇ ಎದುರುದಾರರ ಆಕ್ಷೇಪಣೆ ಸಲ್ಲಿಕೆಯಾಗಿಲ್ಲ ಹಾಗೆಯೇ ಶ್ರೀಮತಿ ಸುಬ್ಬಮ್ಮ ಇವರು ಗುಜ್ಜಾಡಿ ಗ್ರಾಮದ ಸರ್ವೇ ನಂ:55/2 ಕ್ಕೆ ಇತರೆ ವಾರಸುದಾರರು ಇದ್ದರೂ ಸಹ ಅವರುಗಳ ಅನುಮತಿಯನ್ನು ಪಡೆಯದೇ ಇದ್ದರೂ ಅವರಿಗೆ ಕಟ್ಟಡ ರಚನೆ ಬಗ್ಗೆ ಪರವಾನಗೆಯನ್ನು ನೀಡಿರುವುದು ಅಕ್ರಮವೆಂದು ಕಂಡು ಬರುತ್ತದೆ. ಈ ಸಂಬಂಧವು ಸಹ 1 ಮತ್ತು 2ನೇ ಎದುರುದಾರರುಗಳು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ದೂರುದಾರರು ತಿಳಿಸಿರುವಂತೆ ಶ್ರೀ ದಿನೇಶ್ ಆಚಾರಿ ಇವರು ಸರ್ವೇ ನಂ.55/1 ರಲ್ಲಿ 8–9 ವರ್ಷಗಳಿಂದ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುತ್ತಾರೆಂದು ಅವರು ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ, ಈ ದೂರಿಗೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟ ಸಾಕ್ಷ್ಯಾದಾರಗಳು ಪ್ರಕರಣದಲ್ಲಿ ಮೂಡಿ ಬಂದಿರುವುದಿಲ್ಲ. ಇದಲ್ಲದೇ ಸರ್ವೇ ನಂಬರ್ 55/2 ರಲ್ಲಿ ಪ್ಲೈನಿಂಗ್ ಮಶಿನ್ ಅನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಪಡೆದಿರುವ ಬಗೆಗೂ ಸಹ ಸ್ಪಷ್ಟ ಸಾಕ್ಷ್ಯಾಧಾರಗಳು ಇರುವುದಿಲ್ಲ.

10. 3ನೇ ಎದುರುದಾರರು ತಿಳಿಸಿರುವಂತೆ ರಾಜೀವ್ ಗಾಂಧಿ ವಸತಿ ಯೋಜನೆಯಡಿ ಶ್ರೀ ಸದಾಶಿವ ಆಚಾರಿ ಇವರಿಗೆ ವಿದ್ಯುತ್ ಸಂಪರ್ಕವನ್ನು ಗ್ರಾಮ ಪಂಚಾಯತಿ ವತಿಯಿಂದ ಬಂದ ಶಿಫಾರಸ್ಸಿನ ಮೇಲೆ ತಾವು ವಿದ್ಯುತ್ ಸಂಪರ್ಕವನ್ನು ಕೊಟ್ಟಿರುವುದಾಗಿ ತಿಳಿಸಿದ್ದು, ಅದಕ್ಕೆ ಪೂರಕವಾಗಿ ಗ್ರಾಮ ಪಂಚಾಯತಿ ವತಿಯಿಂದ ನೀಡಿರುವ ಶಿಫಾರಸ್ಸು ಪತ್ರವನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ, ಸದರಿ ಫಲಾನುಭವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಹಾಗೂ ಮನೆ ಕಟ್ಟಲು ಸ್ವಂತ ಜಾಗ ಇರುವ ಬಗ್ಗೆ ಪರಿಶೀಲಿಸದೆ ಗ್ರಾಮ ಪಂಚಾಯತಿ ವತಿಯಿಂದ ಶಿಫಾರಸ್ಸು ಪತ್ರ ನೀಡಿರುವುದು, ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯವರ ನಿರ್ಲಕ್ಷತನವನ್ನು ತೋರಿಸುತ್ತದೆ.

11. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಶ್ರೀ ಸದಾಶಿವ ಆಚಾರಿ ಹಾಗೂ ಶ್ರೀಮತಿ ಸುಮನಾ ಇವರು ಅಕ್ರಮವಾಗಿ ಕಟ್ಟಿರುವ ಕಟ್ಟಡಕ್ಕೆ ಹಾಗೆಯೇ ಶ್ರೀಮತಿ ಸುಬ್ಬಮ್ಮ ಇವರು ಅಕ್ರಮವಾಗಿ ಕಟ್ಟಿರುವ ಕಟ್ಟಡಕ್ಕೆ ಸಂಬಂಧಿಸಿದಂತೆ ಕಟ್ಟಡ ತೆರವುಗೊಳಿಸಲು ಕಾನೂನಿನಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ

ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.